ಪ್ರಜಾವಾಣಿ

# ನಾಳೆಯಿಂದ ವಾರ್ಷಿಕ ಕ್ರೀಡಾಕೂಟ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ವಾರ್ಷಿಕ ಕ್ರೀಡಾಕೂಟಗಳು ಫೆ. 16ರಂದು ಆರಂಭವಾಗಲಿವೆ.

15ನೇ ವರ್ಷದ ಈ ಕ್ರೀಡಾ ಕೂಟದಲ್ಲಿ ಒಂದು ಸಾವಿರಕ್ಕೂ ಅಧಿಕ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ. ನಾಲ್ಕು ದಿನ ನಡೆಯುವ ಕೂಟದಲ್ಲಿ ರಾಷ್ಟ್ರದ ವಿವಿಧ ಕಾಲೇಜುಗಳ ಸ್ಪರ್ಧಿಗಳು ಪೈಪೋಟಿ ನಡೆಸಲಿದ್ದಾರೆ.

ಮದ್ರಾಸ್ ಕ್ರಿಶ್ಚಿಯನ್ ಕಾಲೇಜು, ಹಿಂದುಸ್ತಾನ ವಿಶ್ವ ವಿದ್ಯಾಲಯ, ಡಿ.ಬಿ. ಜೈನ್ ಕಾಲೇಜು, ಗುರುನಾನಕ್ ಕಾಲೇಜು, ಎಂಒಪಿ ವೈಷ್ಣವಿ ಕಾಲೇಜು, ಸುರಾನಾ ಕಾಲೇಜು, ಪ್ರೆಸಿಡೆನ್ಸಿ ಕಾಲೇಜು ಸೇರಿದಂತೆ ಇತರ ಪ್ರಮುಖ ಕಾಲೇಜುಗಳು ಸ್ಪರ್ಧಿಸಲಿವೆ.

ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಕ್ರಿಕೆಟ್, ಹಾಕಿ, ಈಜು, ಟೇಬಲ್ ಟೆನಿಸ್, ಟೆನಿಸ್ ಮತ್ತು ವಾಲಿಬಾಲ್ ಸ್ಪರ್ಧೆಗಳು ನಡೆಯಲಿವೆ.